ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 06 ಡಿವಿಪಿ(2) 2019

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:26-04-2019.

## ಸುತ್ತೋಲೆ

ವಿಷಯ: 2019-20ನೇ ಸಾಲಿಗೆ ನವದೆಹಲಿಯ ಎಐಸಿಟಿಇಯ ಮಾನ್ಯತೆ ಪಡೆದ ರಾಜ್ಯದಲ್ಲಿ ಹಾಲಿ ಇರುವ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ : 2019-20ನೇ ಸಾಲಿಗೆ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇ ಯು ನೀಡಿರುವ ಅನುಮೋದನೆ.

~******~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನವದೆಹಲಿಯ ಎಐಸಿಟಿಇಯ ಮಾರ್ಗಸೂಚಿಗಳನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಿಂದ 2019-20ನೇ ಸಾಲಿಗೆ ನವದೆಹಲಿಯ ಎಐಸಿಟಿಇಯ ಮಾನ್ಯತೆ ವಿಸ್ತರಣೆಯನ್ನು ಪಡೆಯಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿರುವುದು ಸರಿಯಷ್ಟೆ. ಈ ಪಾಲಿಟೆಕ್ನಿಕ್‌ಗಳಿಗೆ ಎಐಸಿಟಿಇಯು ಪಾಲಿಟೆಕ್ನಿಕ್‌ಗಳ ವೆಬ್‌ಪೋರ್ಟಲ್‌ನಲ್ಲಿ ಅನುಮೋದನೆಯನ್ನು ವಿಸ್ತರಿಸಿ ಆದೇಶ (AICTE's extension of Approval letter EOA for 2019-20) ನೀಡುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಆದೇಶವನ್ನು ಡೌನ್‌ಲೋಡ್ ಮಾಡಿ ದೃಢೀಕರಿಸಿ **ಐದು** ಪ್ರತಿಗಳನ್ನು ಹಾಗೂ Soft Copyಯನ್ನು ಮತ್ತು ಇದರ ಜೊತೆಗೆ AICTE's extension of Approval letter for 2018-19 ರ ಒಂದು ಪ್ರತಿಯನ್ನು ಸಹ ಕೂಡಲೇ ನಿರ್ದೇಶನಾಲಯಕ್ಕೆ ತಲುಪಿಸಬೇಕಾಗಿ ಸೂಚಿಸಲಾಗಿದೆ.

ನವದೆಹಲಿಯ ಎಐಸಿಟಿಇಯ ಮಾನ್ಯತೆ ಪಡೆದ ಪಾಲಿಟೆಕ್ನಿಕ್‌ಗಳಿಗೆ ರಾಜ್ಯ ಸರ್ಕಾರದ ಮಾನ್ಯತೆಯನ್ನು ಪಡೆಯಲು ಹಾಗೂ ಕೋರ್ಸ್‌ವಾರು ಪ್ರವೇಶಾತಿಯನ್ನು ನಿಗಧಿಪಡಿಸಿ ಆದೇಶ ಹೊರಡಿಸುವಂತೆ ಕೋರಿ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸಬೇಕಾಗಿರುತ್ತದೆ. ಆದ್ದರಿಂದ ನಿಮ್ಮ ಪಾಲಿಟೆಕ್ನಿಕ್‌ಗೆ 2019-20ನೇ ಸಾಲಿಗೆ ಎಐಸಿಟಿಇ ಯ ಅನುಮೋದನೆ ಪಡೆದಿರುವ **ಐದು** ದೃಢೀಕೃತ ಪ್ರತಿಗಳನ್ನು [duly attested by the Principal] ಹಾಗೂ Soft Copyಯನ್ನು ಕೂಡಲೇ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು. ಈ ದಿಸೆಯಲ್ಲಿ ಯಾವುದೇ ರೀತಿಯ ವಿಳಂಬ ಸಲ್ಲದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ.
2. ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ - ನಿರ್ದೇಶನಾಲಯದ ಇ-ಗೌರ್ನೆನ್ಸ್ ಸೆಲ್‌ಗೆ.